**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **8325/2022**

ಸಿ.ಡಬ್ಲ್ಯೂ –3 ಪಿ.ಡಬ್ಲ್ಯೂ -3

| | | |
|---|---|---|
| ಹೆಸರು | ಃ | ಚನ್ನವೀರಯ್ಯ |
| ತಂದೆ | : | ಶಿವಶಂಕರಯ್ಯ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ05.09.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1, 2 ಪರಿಚಯ ಇರುತ್ತಾರೆ. ನಾನು ಶವ ಪಂಚನಾಮೆ ಮಾಡುವಾಗ ಸಹಿ ಮಾಡಿದೇನು. ಅಪಘಾತವಾಗಿ ಮೃತನಿಗೆ ತಲೆಗೆ ಪೆಟ್ಟಾಗಿತ್ತು. ಸಾಕ್ಷಿಗೆ ಈಗ ಶವ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಹಿ ಗುರತಿಸಿದ್ದು, ಶವ ಪಂಚನಾಮೆಯನ್ನು ನಿಪಿ-3 ಹಾಗೂ ಅದರ ಮೇಲೆ ಇರುವ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಭಗಂವತರವರ ಶವ ಪರಿಕ್ಷೆ ಮಾಡಿರುತ್ತಾರೆ ಎಂದರೆ ಸರಿ. ಮೃತ ಭಗವಂತರವರಿಗೆ ತಲೆಗೆ, ಕುತ್ತಿಗೆಗೆ ರಕ್ತಗಾಯವಾಗಿರುತ್ತದೆ ಎಂದರೆ ಸರಿ. ಕಿವಿಯಿಂದ ಹಾಗೂ ಮುಗಿನಿಂದ ರಕ್ತ ಬರುತ್ತಿತ್ತು ಎಂದರೆ ಸರಿ. ಕಣ್ಣು ಮೂಗು ಬಾಯಿಗೂ ಗಾಯವಾಗಿತ್ತು ಎಂದರೆ ಸರಿ. ಬಲಗೈ ಮೊಳಕೈ ಹತ್ತಿರ ರಕ್ತಗಾಯವಾಗಿತ್ತು ಎಂದರೆ ಸರಿ. ಬಲಗಾಲಿನ ಹಿಮ್ಮಡಿ ಹತ್ತಿರ ರಕ್ತಗಾಯವಾಗಿತ್ತು ಎಂದರೆ ಸರಿ.

ದಿ.29.05.2022 ರಂದು ಬೆಳಗ್ಗೆ 9.45 ರಿಂದ 10.45 ಗಂಟೆಯ ವರೆಗೆ ಶವ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ** ಎಸ.ಎಸ.ಸಿ, **ವಕೀಲರಿಂದ**

ನಾನು ಒಕ್ಕಲುತನ ಮಾಡುತ್ತೇನೆ. ನಾನು ಪಂಚಾಯತಿ ಸದಸ್ಯ ಇರುವುದಿಲ್ಲ. ಭಗವಂತರವರ ಶವ ಪಂಚನಾಮೆ ಮಾಡುವಾಗ ಹಳದಿ ಬಣ್ಣದ ಟಿ-ಶರ್ಟ ಇಟ್ಟು. ಡಾರ್ಕ ಕಪ್ಪು ಬಣ್ಣದ ಪ್ಯಾಂಟ ಇತ್ತು. ಶವ ಪಂಚನಾಮೆ ಮಾಡುವಾಗ

ಬಹಳ ಜನ ಇದ್ದರು. ಶಂಕರ, ಭೀಮಾಶಂಕರ, ಮಾಳಪ್ಪ, ಯಲ್ಲಾಲಿಂಗ, ದಯಾನಂದ ಇದ್ದರು. ಆದರೆ ಶವ ಪಂಚನಾಮೆಗೆ ಇಬ್ಬರೇ ಸಹಿ ಮಾಡಿರುತ್ತೇವೆ. ಶವ ಪಂಚನಾಮೆ ಮಾಡಲು ಪೋಲಿಸರು ಕರೆದಿರುತ್ತಾರೆ. ಬೆಳಗ್ಗೆ 10 ಗಂಟೆಗೆ ಕರೆದಿದ್ದರು. ನನಗೂ ಹಾಗೂ ಚಾಸಾ-2 ರವರಿಗೂ ಕರೆದಿದ್ದರು. ಉಳಿದವರಿಬ್ಬರೂ ಆದರೆ ನನ್ನನ್ನು ಹಾಗೂ ಚಾಸಾ-2 ರವರನ್ನು ಸಾಕ್ಷಿಯನ್ನಾಗಿ ಸಹಿ ತೆಗೆದುಕೊಂಡಿದ್ದಾರೆ. ಪೋಲಿಸರು ಶವ ಪಂಚನಾಮೆಗೆ ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ. ಶವ ಪಂಚನಾಮೆ ಮಾಡಲು ಹೊಲದ ಹತ್ತಿರ ಕರೆದಿದ್ದರು. ಶವ ಪಂಚನಾಮೆಯನ್ನು ಹೊಲದ ಹತ್ತಿರ ಮಾಡಿದರು. ಭಗವಂತರವರ ಶವ ಪಶ್ಚಿಮ ದಿಕ್ಕಿಗೆ ತಲೆ ಮಾಡಿ ಇತ್ತು. ಶವ ನೇರವಾಗಿ ಇತ್ತು. ಶವ ಪಂಚನಾಮೆ ಮಾಡಿದ ಹೊಲದ ಚಕುಬಂದಿ ಹೇಳಲು ಬರುವುದಿಲ್ಲ. ಶವ ಪಂಚನಾಮೆಯನ್ನು ಒಂದು ಗಂಟೆ ಮಾಡಿದರು. ಶವ ಪಂಚನಾಮೆ ಮಾಡುವಾಗ ಚಾಸಾ-1 ರವರು ಇರಲಿಲ್ಲ. ಚಾಸಾ-1 ರವರು ಇಂದು ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ನಾನು, ಚಾಸಾ-1 ಹಾಗೂ 5 ರವರು ಕೂಡಿಕೊಂಡು ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿ. ಚಾಸಾ-1 ರವರು ನನಗೆ ಬೇಕಾದವರು ಎಂದರೆ ಸರಿ. ನಾನು ಆರೋಪಿಯನ್ನು ಈ ಮೊದಲು ಎಲ್ಲಿಯೂ ನೋಡಿರುವುದಿಲ್ಲ ಎಂದರ ಸರಿಯಲ್ಲ. ನಾನು ಆರೋಪಿಯನ್ನು ನರೋಣಾದಲ್ಲಿ ನೋಡಿರುತ್ತೇನೆ. ನಾನು ಶವ ಪಂಚನಾಮೆ ಮಾಡುವಾಗ ಆರೋಪಿಯನ್ನುಮೊದಲು ನೋಡಿರುತ್ತೇನೆ ಎಂದು ಹೇಳಿರುವುದಿಲ್ಲ. ನಾನು ಚಾಸಡಾ-1 ರವರ ಮಾತು ಕೇಳಿ ಶವ ಪಂಚನಾಮೆ ಮಾಡುವಾಗ ಹಾಜರು ಇದ್ದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಕೇವಲ ಪೋಲಿಸರು ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಹೇಳಿದ ಮೇರೆಗೆ ಸುಳು ಸಾಕ್ಷ ನಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.